(ಆ) ೧೯೮೨-೮೩, ೮೩-೮೪ನೇ ಸಾಲಿನಲ್ಲಿ ಸರಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಸೇರಿದ ವಿದ್ಯಾರ್ಥಿಗಳ ಕಾಲೇಜುವಾರು ಸಂಖ್ಯೆ ಎಷ್ಟು ?

(ಆ) ಕಾಲೇಜುವಾರು ಯಾವ ಯಾವ ಜಾತಿಯವರು ಎಷ್ಟೆಷ್ಟು ಜನರಿದ್ದಾರೆ ?

ಕಾರ್ಮಿಕರ ವಿವಾದಗಳಲ್ಲಿ ಪೋಲಿಸರ ಮಧ್ಯೆ ಪ್ರವೇಶದ ಬಗ್ಗೆ.

೨೨೨. ಶ್ರೀ ಎಸ್. ಸೂರ್ಯನಾರಾಯಣರಾವ್ (ಪತ್ತೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಕಾರ್ಮಿಕ ವಿವಾದಗಳಲ್ಲಿ ೧೯೮೨-೮೩ ಮತ್ತು ೧೯೮೩-೮೪ನೇ ಸಾಲಿನಲ್ಲಿ ಇಲ್ಲಿಯವರೆಗೂ ಪೋಲೀಸರು ಎಷ್ಟು ಕಾರ್ಮಿಕ ವಿವಾದಗಳಲ್ಲಿ ಮಧ್ಯೆ ಪ್ರವೇಶಿಸಿದ್ದಾರೆ ಮತ್ತು ಇವುಗಳಲ್ಲಿ ಆಡಳಿತ ವರ್ಗದವರು ಕೊಟ್ಟ ದೂರುಗಳ ಮೇಲೆ ಈ ಮಧ್ಯ ಪ್ರವೇಶವಾಗಿರುವುದು ಎಷ್ಟು ಬಾರಿ ;

(ಆ) ಈ ರೀತಿ ಮಧ್ಯ ಪ್ರವೇಶದ ಪ್ರಸಂಗಗಳಲ್ಲಿ ಕಾರ್ಮಿಕ ಮುಖಂಡರುಗಳ ಮೇಲೆ ಒಟ್ಟು ಎಷ್ಟು ಮೊಕದ್ದಮೆಗಳನ್ನು ಹಾಕಲಾಗಿದೆ ಮತ್ತು ಎಷ್ಟು ಮೊಕದ್ದಮೆಗಳ ತೀರ್ಮಾನ ಎರಡು ವರ್ಷಕ್ಕಿಂತಲೂ ಹೆಚ್ಚು ಮೂರು ವರ್ಷಕ್ಕಿಂತಲೂ ಹೆಚ್ಚು ಮತ್ತು ಐದು ವರ್ಷಕ್ಕಿಂತಲೂ ಹೆಚ್ಚು ತಡವಾಗಿದೆ ;

(ಇ) ಮೊಕದ್ದಮೆಗಳನ್ನು ಸರ್ಕಾರದವರು ಹಿಂತೆಗೆದುಕೊಳ್ಳುವ ಭರವಸೆ ನೀಡುವರೇ ?

(ಈ) ಈ ರೀತಿಯ ಕಾರ್ಮಿಕ ವಿವಾದಗಳ ಮಧ್ಯವರ್ತಿಯಲ್ಲಿ ಅಕ್ರಮ ಮಧ್ಯ ಪ್ರವೇಶಗಳನ್ನು ತಡೆಗಟ್ಟಲು ಮತ್ತು ಕಾರ್ಮಿಕರಿಗೆ ತಮ್ಮ ಹಕ್ಕಿನ ಚಲಾವಣೆಯಲ್ಲಿ ಅಡ್ಡಿಯುಂಟಾಗದಂತೆ ಪೋಲೀಸರು ಕ್ರಮಬದ್ಧವಾಗಿ ಕಾರ್ಯ ನಿರ್ವಹಿಸಲು ಸರ್ಕಾರದವರು ನಿರ್ದೇಶಕ ಸೂತ್ರಗಳನ್ನು ರಚಿಸಿದ್ದಾರೆಯೇ ?

(ಉ) ರಚಿಸಿಲ್ಲದಿದ್ದರೆ ತಕ್ಷಣ ಈ ಬಗ್ಗೆ ಕ್ರಮ ಕೈಗೊಳ್ಳುವುದೆಂದು ಸರ್ಕಾರವು ಭರವಸೆ ನೀಡುವುದೇ ?

ಶ್ರೀ ರಾಮಕೃಷ್ಣ ಹೆಗಡೆ —(ಮಾನ್ಯ ಮುಖ್ಯಮಂತ್ರಿಗಳು)

(ಅ) ಇಲ್ಲ.

(ಆ) ಕಾರ್ಮಿಕ ವಿವಾದಗಳ ಬಗ್ಗೆ ಯಾವ ದಾವೆಗಳೂ ದಾಖಲಾಗಿಲ್ಲ.

(ಇ) ಕಾರ್ಮಿಕ ವಿವಾದಗಳಲ್ಲಿ ಆರಕ್ಷಕರು ಮಧ್ಯ ಪ್ರವೇಶಿಸಿಲ್ಲ. ಆದಾಗ್ಯೂ ಕೆಲವು ನಿರ್ದಿಷ್ಟ ದೂರುಗಳಲ್ಲಿ ಸಂಜ್ಞೇಯ ಅಪರಾಧಗಳು ಕಂಡು ಬಂದಲ್ಲಿ, ದಾವೆಗಳನ್ನು ದಾಖಲು ಮಾಡಿದೆ. ಈ ದಾವೆಗಳನ್ನು ಹಿಂದೆಗೆದುಕೊಳ್ಳುವುದರ ಬಗ್ಗೆ ಅವುಗಳ ಅರ್ಜಿತೆಯ ಆದಾರದ ಮೇಲೆ ನಿರ್ಧಾರವನ್ನು ಕೈಗೊಳ್ಳಲಾಗುವುದು.

(ಈ) ಕಂಡ (ಅ) ಮತ್ತು (ಆ) ಗಳಿಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಉ) ಖಂಡ (ಈ) ಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸರೆಂಡರ್ ಆಗಿರುವ ಹಣ

೨೧೦. ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಹಣಕಾಸು ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ೧೯೮೨-೮೩ನೇ ಸಾಲಿನ ಬಾಬ್ತು ಮಾರ್ಚ್ ೩೧ರ ಕೊನೆಗೆ ಸರ್ಕಾರದ ಯಾವ ಯಾವ ಖಾತೆ ಇಲಾಖೆಗಳಲ್ಲಿ ಎಷ್ಟೆಷ್ಟು ಹಣ ಸರೆಂಡರ್ ಆಗಿದೆ ?

(ಆ) ೧೯೮೨-೮೩ನೇ ಸಾಲಿನ ತಾರೀಖು ೧-೪-೧೯೮೩ ರಿಂದ ೩೧-೩-೧೯೮೪ರ ಒಳಗೆ ಮಾರ್ಚ್ ತಿಂಗಳಲ್ಲಿ ಯಾವ ಯಾವ ಖಾತೆ ಡಿಪಾರ್ಟ್‌ಮೆಂಟಿನಲ್ಲಿ ಎಷ್ಟೆಷ್ಟು ಹಣ ಖರ್ಚಾಗಿದೆ ?

ಇ) ಪ್ರತಿ ವರ್ಷದ ಖರ್ಚಿಗಾಗಿ ಬಹಳ ಮೊದಲೇ ಬಜೆಟ್ ಪಾಸಾಗಿದ್ದರೂ ವರ್ಷದ ಕೊನೆಗೆ ಅದರಲ್ಲೂ ಮಾರ್ಚ್ ತಿಂಗಳ ಕೊನೆಯ ವಾರದಲ್ಲಿ ಬಜೆಟ್‌ನಲ್ಲಿ ತೆಗೆದಿಟ್ಟ ಹಣವನ್ನು ಅಲಾಟಮೆಂಟ್ ಮಾಡಿ ಮಾರ್ಚ್ ೩೧ ದಿವಸದವರೆಗೆ ಹಣವು ಖರ್ಚು ಬೀಳದಂತೆ ನೋಡಿಕೊಳ್ಳುವ ಈ ಕಾರ್ಯ ವೈಖರಿಗೆ ಯಾವ ವಿವಿಧ ವರ್ಗದ ಅಧಿಕಾರಿ ಳು ಕಾರಣರು ?

ಈ) ಪ್ರತಿ ವರ್ಷ ಬಜೆಟ್ಟಿನಲ್ಲಿ ಮಂಜೂರಾದ ಹಣ ಮೊದಲೇ ವಿಲೇವಾರಿ ಮಾಡಿದೆ ಕೊನೆಯ ತಿಂಗಳ ಕೊನೆಗೆ ವಿಲೇವಾರಿ ಮಾಡಿ ಜನತೆಗೆ ಅನ್ಯಾಯ ಮಾಡುವ ಅಧಿಕಾರಿಗಳ ಮೇಲೆ ಸರ್ಕಾರದವರು ಯಾವ ಕ್ರಮ ತೆಗೆದುಕೊಳ್ಳುವರು ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳು).—

ಅ) ಮತ್ತು ಆ) ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ಮತ್ತು ಈ ನೆಯ ಕಾಲಂಗಳಲ್ಲಿ ಕೊಟ್ಟಿದೆ.

ಇ) ವರ್ಷದ ಕೊನೆಯವರೆವಿಗೂ ಬಜೆಟ್ ಹಂಚಿಕೆಯನ್ನು ತಡಮಾಡಿದ ಸಂದರ್ಭಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ

ಕ್ರಮ ಸಂಖ್ಯೆ	ಖಾತೆ ಇತ್ಯಾದಿ	ಬಜೆಟ್ ಅಂದಾಜು ೧೯೮೨–೮೩	ಮಾರ್ಚ್ ತಿಂಗಳ ವೆಚ್ಚ	೧೯೮೨–೮೩ರಲ್ಲಿ ಸರೆಂಡರ್ ಆದ ಹಣ
೧	೨	೩	೪	೫
				ಲಕ್ಷ ರೂ. ಗಳಲ್ಲಿ
೧.	ರಾಜ್ಯ ವಿಧಾನ ಮಂಡಲ	೧೮೯.೦೦	೨೭ ೦೧	೩.೮೪
೨.	ರಾಜ್ಯಪಾಲರು	೨೩.೦೦	೩.೦೪	—
೩.	ಮಂತ್ರಿ ಮಂಡಲ	೭೮,೦೦	೬.೭೪	೩.೪೦
೪.	ನ್ಯಾಯ ಪರಿಪಾಲನೆ	೧೧೪೪ ೮೦	೧೧೧.೬೫	೨೩ ೪೦
೫.	ಚುನಾವಣೆಗಳ	೧೭೧.೦೦	೫೧.೧೧	೦.೨೬
೬.	ವರಮಾನ, ಬಂಡವಾಳ ಮತ್ತು ವೆಚ್ಚದ ಮೇಲಣ ತೆರಿಗೆ ವಸೂಲಿ	೬೭.೦೦	೭.೯೩	೩.೧೮
೭.	ಭೂಕಂದಾಯ	೧೪೧.೦೦	೧೬.೨೩	೪೫.೫೯
೮.	ಮುದ್ರಾಂಕ ಮತ್ತು ನೋಂದಣಿ	೨೩೧.೦೦	೩೮.೫೯	೫.೮೦
೯.	ರಾಜ್ಯ ಆಬಕಾರಿ	೪೩೮.೦೦	೫೮.೪೩	೩೬.೨೯
೧೦.	ಮಾರಾಟ ತೆರಿಗೆ	೪೯೬.೦೦	೬೯.೫೬	೮.೩೫
೧೧.	ವಾಹನ ತೆರಿಗೆಗಳು	೨೦೯.೦೦	೨೬.೨೬	೬.೪೩
೧೨.	ಸರಕುಗಳು ಮತ್ತು ಸೇವೆಗಳ ಮೇಲಿನ ಇತರ ತೆರಿಗೆ ಮತ್ತು ಶುಲ್ಕಗಳು	೧೧೯.೦೦	೧೩.೭೮	೧೬.೦೩
೧೩.	ಇತರ ರಾಜ್ಯದಾಯ ಸೇವೆಗಳು	೪೧.೦೦	೯.೮೭	—
೧೪.	ಬಡ್ಡಿ ಸಂದಾಯ	೮೪೯.೦೦	೩೩೮೪ ೬೪	೩೨೬.೭೯
೧೫.	ಲೋಕ ಸೇವಾ ಆಯೋಗ	೪೧.೦೦	೫ ೩೩	೦.೭೦
೧೬.	ಸಚಿವಾಲಯ	೫೯೧.೦೦	೭೦.೨೫	೧೬.೦೩
೧೭.	ಜಿಲ್ಲಾ ಆಡಳಿತ	೮೮೨.೦೦	೧೦೪.೭೭	೦.೪೨

೧	೨	೩	೪	೫
೧೮.	ವಿಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತ	೩೭೬.೦೦	೪೦.೪೦	೨.೯೮
೧೯.	ಪೋಲಿಸ್	೫೨೫.೦೦	೯೫೨.೧೦	೦.೫೦
೨೦.	ಜೈಲುಗಳು	೨೨೪.೦೦	೨೮.೫೩	೧.೯೦
೨೧.	ಸರಬರಾಜು ಮತ್ತು ವಿಲೇವಾರಿ	೧೩.೦೦	೧.೨೩	೦.೦೬
೨೨.	ಲೇಖನ ಸಾಮಗ್ರಿ ಮತ್ತು ಮುದ್ರಣ	೫೫೦.೦೦	೧೬೦.೩೪	೩೭.೭೬.
೨೩.	ಲೋಕೋಪಯೋಗಿ	೧೬೩೦.೦೦	(—)೪೦೫.೬೧	—
೨೪.	ಅಗ್ನಿಯಿಂದ ರಕ್ಷಣೆ ಮತ್ತು ನಿಯಂತ್ರಣ	೨೪೫.೦೦	೪೫.೧೯	೨೭.೧೦
೨೫.	ಇತರ ಆಡಳಿತ ಸೇವೆಗಳು	೪೧೦.೦೦	೬೬.೫೫	೪೭.೩೨
೨೬.	ವಿಶ್ರಾಂತಿ ವೇತನ ಮತ್ತು ಇತರ ವಿವೃತ್ತಿ ಸೌಲಭ್ಯಗಳು	೫೩೫೦.೦೦	೬೧೪.೫೯	೦.೫೦
೨೭.	ವಿ ಧ ಸಾಮಾನ್ಯ ಸೇವೆಗಳು	೧೩೨೮.೦೦	೩೯೫.೪೦	೭೯.೭೩
೨೮.	ಶಿಕ್ಷಣ	೨೩೬೫೨.೦೦	೨೯೬೯.೭೬	೧೦.೨೩.೮೬
೨೯.	ಕಲೆ ಮತ್ತು ಸಂಸ್ಕೃತಿ	೪೫೩.೦೦	೧೧೪ ೫೧	೮೧.೨೧
೩೦.	ವೈಜ್ಞಾನಿಕ ಸೇವೆ ಮತ್ತು ಸಂಶೋಧನೆ	೭.೦೨	೦.೯೮	—
೩೧.	ವೈದ್ಯಕೀಯ	೬೬೯.೬೫	೧೨೪೧.೪೬	೬೧೦ ೪೧
೩೨.	ಕುಟುಂಬ ಕಲ್ಯಾಣ	೧೪೯೫.೦೦	೨೯೦.೬೪	೧೪೬.೯೦
೩೩.	ಜನಾರೋಗ್ಯ ನೈರ್ಮಲ್ಯ ಮತ್ತು ನೀರು ಪೂರೈಕೆ	೩೭೦೦.೯೭	೧೦೫೮.೮೨	೨೦೨.೨೮
೩೪.	ಗೃಹ ನಿರ್ಮಾಣ	೧೫೩೪.೦೦	೩೭೦.೮೯	೩೨೫.೧೦
೩೫.	ನಗರಾಭಿವೃದ್ಧಿ	೯೫೨.೦೦	೩೨೭.೯೭	೩೭೭.೬೭
೩೬.	ವಾರ್ತಾ ಮತ್ತು ಪ್ರಚಾರ	೨೯೪.೦೦	೪೧.೦೪	೧೮.೩೩
೩೭.	ಕಾರ್ಮಿಕ ಮತ್ತು ಉದ್ಯೋಗ	೧೦೪೦.೦೦	೧೧೮.೨೧	೮೧.೯೦
೩೮.	ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ	೬೫೧೨.೬೦	೧೮೫೪.೧೮	೧೩೮.೯೧
೩೯.	ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ	೩೦೦ ೦೦	೧೯೪.೩೩	೭೮.೩೦
೪೦.	ಇತರ ಸಾಮಾಜಿಕ ಮತ್ತು ಸಾಮುದಾಯಿಕ ಸೇವೆ	೩೧೪.೦೦	೧೩೫.೪೨	೨೧.೮೯
೪೧.	ಸಹಕಾರ	೩೨೮೯.೦೦	೮೭೦.೪೮	೧೪೦೭.೯೭
೪೨.	ಇತರ ಸಾಮಾನ್ಯ ಆರ್ಥಿಕ ಸೇವೆಗಳು	೨೮೨೭.೦೦	೨೬೩.೮೧	೫೯೨.೩೫
೪೩.	ವ್ಯವಸಾಯ	೬೩೦೯.೦೪	೨೪೦೪.೪೮	೯೩೫.೬೨
೪೪.	ಸಣ್ಣ ನೀರಾವರಿ	೩೨೪೩.೨೯	೧೦೧೧.೫೯	೧೨೧.೦೭
೪೫.	ಭೂಸಾರ ಮತ್ತು ಜಲ ರಕ್ಷಣೆ	೫೫೦.೦೦	೯.೩೧	೩೩.೧೩
೪೬.	ಕ್ಷೇತ್ರಾಭಿವೃದ್ಧಿ	೧೦೧೯.೦೦	೪೩೬.೮೨	೬.೪೨
೪೭.	ಆಹಾರ	೬೯.೦೦	(—)೧೫೫.೨೦	೭೨೪.೦೦
೪೮.	ಪಶುಸಂಗೋಪನೆ	೧೨೦೮.೦೦	೩೦೫.೪೫	——
೪೯.	ಡೇರಿ ಅಭಿವೃದ್ಧಿ	೧೦೯೭.೦೦	೩೦೯.೩೨	——
೫೦.	ಮೀನುಗಾರಿಕೆ	೫೮೬.೨೫	೭೯.೫೪	೧೦೯.೩೩
೫೧.	ಅರಣ್ಯ	೨೮೮೩.೦೦	೬೫೩.೨೦	೩.೧೮
೫೨.	ಸಾಮುದಾಯಕ ಅಭಿವೃದ್ಧಿ	೪೯೭೬.೦೧	೨೯೦೭.೩೦	೨೩೪.೦೨
೫೩.	ಉದ್ಯಮ	೨೯೧೯.೦೦	೧೨೧೫.೬೨	೭೯.೭೦
೫೪.	ಗ್ರಾಮೋದ್ಯಮ ಮತ್ತು ಸಣ್ಣ ಉದ್ಯಮಗಳು	೨೭೩೪.೯೬	೧೨೪೧.೫೪	೧೮೯.೮೧

1		2	3	
೫೫.	ಗಣಿಗಳು ಮತ್ತು ಖನಿಜಗಳು	೮೫.೦೦	೧೪.೦೫	೧ ೨೪
೫೬.	ಜಲ ಮತ್ತು ಅಭಿವೃದ್ಧಿ ಸೇವೆಗಳು	೨೭೨.೦೦	೧೭.೩೦	೨೬.೦೫
೫೭.	ನೀರಾವರಿ, ಜಲ ಸಂಚಾರ, ಚರೆಂಡಿ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು	೧೮೮೯.೦೦	೨೨೮೭.೬೮	೪೮೪.೮೯
೫೮.	ವಿದ್ಯುತ್ ಯೋಜನೆ	೧೪೬೧೦.೨೦	೬೫೩.೦೭	೧೮೪೯.೪೪
೫೯.	ಬಂದರುಗಳು ದೀಪಗೃಹಗಳು ಮತ್ತು ನೌಕಾ ವ್ಯವಸ್ಥೆ	೧೮೫.೦೦	೭೭.೬೨	——
೬೦.	ನಾಗರಿಕ ವಿಮಾನಯಾನ	೧೨.೦೦	೨.೬೪	೦.೬೪
೬೧.	ರಸ್ತೆಗಳು ಮತ್ತು ಸೇತುವೆಗಳು	೪೭೬೭.೦೦	೯೮೧.೯೬	೯೭.೯೨
೬೨.	ರಸ್ತೆ ಮತ್ತು ಜಲಸಾರಿಗೆ ಸೇವೆ	೮೮೩.೨೦	೩೭೨.೨೦	೦.೧೪
೬೩.	ಪ್ರವಾಸೋದ್ಯಮ	೧೮೭.೦೦	೪೧.೭೯	೨.೭೮
೬೪.	ಸ್ಥಳೀಯ ಮತ್ತು ಪಂಚಾಯತಿ ರಾಜ್ಯ ಸಂಸ್ಥೆಗಳಿಗೆ ಪರಿಹಾರ ಮತ್ತು ಪಾಲುಗಳು	೪೫೯.೦೦	೧೩೦೯.೪೩	೫೧೪.೪೦
೬೫.	ರಾಜ್ಯ ಸರ್ಕಾರದ ಆಂತರಿಕ ಸಾಲಗಳು	೪೧೭೬೦.೦೦	೧೮೫೭೭.೯೧	——
೬೬.	ಕೇಂದ್ರ ಸರ್ಕಾರದ ಸಾಲಗಳು	೭೦೨೬.೦೦	೩೪೮೧.೦೬	——
೬೭.	ಸರ್ಕಾರಿ ನೌಕರರಿಗೆ ಸಾಲಗಳು	೨೯೭೬.೦೦	೩೯೨.೫೮	೮೦೫.೫೧
೬೮.	ಇತರ ಸಾಲಗಳು	೬೦೨.೦೦	೫೩.೪೬	೧೫೧.೦೦
೬೯.	ಲೋಕೋಪಯೋಗಿ ಕಟ್ಟಡಗಳು ಆಯಾ ಇಲಾಖೆ ಖಾತೆಯಲ್ಲಿ ಸೇರಿದೆ.			೫೦೦.೭೧
೭೦.	ಅಂತರ ರಾಜ್ಯ ತೀರಿಕೆ	೨೦೦.೦೦	—	—
		೨೦೭೪೪೧.೯೬	೬೪೫೦೪.೦೩	೧೨೫೧೧.೪೭

ವಿವಿಧ ಅಕಾಡಮಿಗಳಲ್ಲಿ ಮಾಶಾಸನ ನೀಡುವ ಬಗ್ಗೆ

೨೨೮. ಶ್ರೀ ಕೆ. ಮಲ್ಲಪ್ಪ (ಹರಿಹರ). ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಯುವಜನ ಹಾಗೂ ಕ್ರೀಡೆಗಳ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ವಿವಿಧ ಅಕಾಡೆಮಿಗಳಲ್ಲಿ ಎಷ್ಟು ಜನರಿಗೆ ಮಾಶಾಸನ ನೀಡಲಾಗಿದೆ.

ಆ) ಕಲೆ, ಸಾಹಿತ್ಯ, ನಾಟಕ, ಸಂಗೀತ, ಶಿಲ್ಪ ಹಾಗೂ ಚಿತ್ರಕಲೆಗಳಲ್ಲಿ ತಲಾವಾರು ಎಷ್ಟು ಜನರಿಗೆ ಮಾಶಾಸನ ನೀಡಲಾಗಿದೆ.

ಇ) ಇವರುಗಳ ಪೈಕಿ ಎಷ್ಟು ಮಂದಿ ನಿಮ್ನವರ್ಗ, ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರಿಗೆ ಮಾಸಾಶನ ನೀಡಲಾಗಿದೆ.

ಶ್ರೀ ಜೀವರಾಜ ಆಳ್ವ.— (ಮಾನ್ಯ ಯುವಜನ ಹಾಗೂ ಕ್ರೀಡೆಗಳ ರಾಜ್ಯ ಮಂತ್ರಿಗಳು)

ಅ) ೧೭೧೬.

ಆ)

ಸಂಗೀತ ನೃತ್ಯ	೫೫೩
ನಾಟಕ	೯೦೭
ಜಾನಪದ ಮತ್ತು ಯಕ್ಷಗಾನ	೧೫೬
ಸಾಹಿತ್ಯ	೫೪
ಚಿತ್ರಕಲೆ ಹಾಗೂ ಶಿಲ್ಪ	೬೬
	೧೭೧೬